**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 3810/2022**

ಸಿ.ಡಬ್ಲ್ಯೂ -04

ಪಿ.ಡಬ್ಲ್ಯೂ-04

ಸಾಕ್ಷಿದಾರನ ಹೆಸರು :- ಚಿಕ್ಕಮರಿಯಪ್ಪ

ತಂದೆಯ ಹೆಸರು :- ಚಿಕ್ಕಮರಿಯಪ್ಪ

ವಯಸ್ಸು :- 75 ವರ್ಷ

ಉದ್ಯೋಗ :- ವ್ಯವಸಾಯ

ವಾಸ :- ವಡ್ಡರಾಳು

**ಸಾಕ್ಷಿಗೆ ದಿಃ 11.11.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಸುಮಾರು 2 ವರ್ಷಗಳ ಹಿಂದೆ ಮಧ್ಯಾಹ್ನ 12 ರಿಂದ 12.30 ರ ಸಮಯದಲ್ಲಿ ನಾನು ನನ್ನ ಜಮೀನಿನಲ್ಲಿ ನೀರನ್ನು ಹಾಯಿಸುತ್ತಿದ್ದು ನನ್ನ ಜಮೀನಿನ ಪಕ್ಕ ಕರಿಯಮ್ಮ ಅವರ ಜಮೀನು ಇದ್ದು ಸದರಿ ಗಂಗಣ್ಣ ಶಿವಲಿಂಗಯ್ಯ ಮತ್ತು ರಾಜಣ್ಣ ಅವರು ಭಾಗ ಮಾಡಿ ವ್ಯವಹಾರ ಮಾಡುತ್ತಿದ್ದು ಅವರ ಪಕ್ಕದಲ್ಲಿ ಆರೋಪಿಯ ಜಮೀನು ಇದ್ದು ರಾಜಣ್ಣ ಅವರು ಅವರ ಜಮೀನನಲ್ಲಿ ಮನೆ ಕಟ್ಟಿದ್ದು ಗಂಗಣ್ಣ ಅವರು ನೀರಿನ ತೊಟ್ಟಿ ಕಟ್ಟಿದ್ದು ಶ್ರೀನಿವಾಸ್ ಆರೋಪಿ 1 ಅವರ ಜಮೀನು ಸ್ವಲ್ಪ ದೂರದಲ್ಲಿದು ಮದ್ಯದಲ್ಲಿ ಗ್ರಾಮ ಠಾಣಾ ಇರುತ್ತದೆ. ಆರೋಪಿ ಅವರ ತಂದೆಯ ಪುಟ್ಟಸ್ವಾಮಯ್ಯ ಆಗಿದ್ದು ಅವರಿಗೆ 4 ಜನ ಮಕ್ಕಳು ಅವರುಗಳೆಂದರೆ ಪುಟ್ಟರಾಮ, ಸುರೇಶ್, ಚಂದ್ರಹಾಸ ಮತ್ತು ಶ್ರೀನಿವಾಸ ಆಗಿರುತ್ತಾರೆ.

ಜೆ.ಸಿ.ಬಿ ಬಂದು ಚಾ.ಸಾ. 2 ಅವರ ಮನೆಯನ್ನು ಗಂಗಣ್ಣ ಅವರ ತೊಟ್ಟಿಯನ್ನು ಹೊಡೆದು ಹಾಕಿದ ನಂತರ ಗಲಾಟೆ ಆರಂಬವಾಗಿರುತ್ತದೆ. ಜೆ.ಸಿ.ಬಿ ಮುದ್ರತಿಪ್ಪೆಸಂದ್ರದ್ದು. ಆರೋಪಿ 1 ಮತ್ತು ಅವರ ಸಹೋದರರು ಜೆ.ಸಿ.ಬಿ ಯನ್ನು ತೆಗೆದುಕೊಂಡು ಬಂದಿರುತ್ತಾರೆ ಅವರ ಜಮೀನನಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿತರೂ ಮತ್ತು ಚಾ.ಸಾ. 1,2 ಅವರು ಕಿತ್ತಾಡುತ್ತಿದ್ದರು ನಾನು ಅದನ್ನು ನೋಡಿರುತ್ತೇನೆ. ನಾನು ಏನು ಮಾಡಿರುವುದಿಲ್ಲ. ಚಾ.ಸಾ. 3,5 ಮತ್ತು 6 ಅವರು ಜಗಳ ಬಿಡಿಸಲು ಹೋಗಿದ್ದು ಚಾ.ಸಾ. 3 ಅವರಿಗೆ ಕಲ್ಲಿನಿಂದ ಅವರ ಕಿವಿಯ ಹತ್ತಿರ ಹೊಡೆದಿರುತ್ತಾರೆ. ಬೋರಮ್ಮ ಅವರ ನಂತರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ.

ಆರೋಪಿ 1 ಅವರು 10-15 ಜನ ಹುಡುಗರನ್ನು ಕರೆದುಕೊಂಡು ಬಂದಿದ್ದರು. ಆರೋಪಿತರನ್ನು ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ನಾನು ಪೊಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ಘಟನೆಗೂ ಮೊದಲು ಆರೋಪಿತರ ಕುಟುಂಬಕ್ಕೂ ಚಾ.ಸಾ. 1 ಅವರ ಕುಟುಂಬಕ್ಕೂ ದಾರಿ ವಿಚಾರಕ್ಕೆ ಸಣ್ಣಪುಟ್ಟ ಗಲಾಟೆಗಳು ಇದ್ದವು ಎಂದರೆ ಸರಿ. ದಿನಾಂಕ 29.03.2022 ರಂದು ಮಧ್ಯಾಹ್ನ 12.30 ಗಂಟೆಯ ಸಮಯದಲ್ಲಿ ಆರೋಪಿ 1 ರಿಂದ 3, ಜಯಮ್ಮ ಎಲ್ಲರೂ ಸೇರಿ ಅಕ್ರಮ ಗುಂಪು ಕಟ್ಟಪಿಕೊಂಡು ಜಗದೀಶ್ ಅವರ ಜೆ.ಸಿ.ಬಿ ತೆಗೆದುಕೊಂಡು ಚಾ.ಸಾ. 2 ಅವರ ಜಮೀನಿಗೆ ಅಕ್ರಮವಾಗಿ ಪ್ರವೇಶ ಮಾಡುತ್ತಾರೆ ಎಂದರೆ ಸರಿ. ಮನೆ ಮತ್ತು ತೊಟ್ಟಿಯನ್ನು ಏಕೆ ಕೆಡುವುತ್ತಿದ್ದೀರಾ ಎಂದು ಪ್ರಶ್ನೆ ಮಾಡಿದ್ದಕ್ಕೆ ಆರೋಪಿ 1 ರಿಂದ 3 ಚಾ.ಸಾ. 1 ಅವ ತಲೆಯ ಜುಟ್ಟನ್ನು ಹಿಡಿದು ಎಳೆದಾಡಿ ಅವರು ಉಟ್ಟುಕೊಂಡಿದ್ದ ಸೀರೆಯನ್ನು ಎಳೆದಾಡಿ ಅವಮಾನ ಮಾಡಿರುತ್ತಾರೆಂದರೆ ಸಾಕ್ಷಿ ನಾನು ನೋಡಿಲ್ಲವೆಂದು ಹೇಳುತ್ತಾರೆ.

ಆರೋಪಿ 5 ಚಾ.ಸಾ. 1 ಅವರಿಗೆ ಕೈಗಳಿಂದ ಮೈ ಕೈಗೆ ಹೊಡೆದಿರುತ್ತಾರೆ ಎಂದರೆ ಸಾಕ್ಷಿ ನಾನು ಬರುವಷ್ಟರಲ್ಲಿ ಹೊಡೆದಿರುತ್ತಾರೆಂದು ಹೇಳುತ್ತಾರೆ. ಆರೋಪಿ 3 ಸಹ ಕಲ್ಲನ್ನು ತೆಗೆದುಕೊಂಡು ಚಾಸಾ. 1 ಅವರ ಎಡಗಾಲಿನ ಪಾದಕ್ಕೆ ಬಲಗಾಲ ಮಂಡಿಗೆ ಬಲಭುಜದ ಮಂಡಿಗೆ ಹೊಡೆದಿರುತ್ತಾರೆಂದರೆ ನಾನು ನೋಡಿಲ್ಲವೆಂದು ಹೇಳುತ್ತಾರೆ. ಆರೋಪಿ 1 ಮತ್ತು 2 ಕಲ್ಲಿನಿಂದ ಸೇರಿಕೊಂಡು ಕಲ್ಲಿನಿಂದ ಆರೋಪಿ 1 ಚಾಸಾ2 ಅವರ ಎಡ ಮತ್ತು ಬಲ ತೊಡೆಯ ಸಂದಿಗೆ ಹೊಡೆದು ನೋವುಂಟು ಮಾಡಿರುತ್ತಾರೆಂದರೆ ಸರಿ. ಆರೋಪಿ 1 ಚಾ.ಸಾ 2 ಎರಡು ಕೃಗಳಿಗೆ ಹೊಡೆದಿದ್ದು ಎಂದರೆ ಸರಿ. ಬೋರಮ್ಮ ಜಗಳ ಬಿಡಿಸಲು ಹೋದಾಗ ಆರೋಪಿ 2 ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಬೋರಮ್ಮ ಅವರ ಕಿವಿಗೆ ರಕ್ತ ಬಂದಿದ್ದು ಕಾಲಿನಿಂದ ಬಲಗಡೇ ಹೊಟ್ಟೆಯ ಮೇಲೆ ಸೊಂಟದ ಮೇಲೆ ಮೊಣಕಾಲಿನ ಮೇಲೆ ಹೊಡೆದು ನೊವುಂಟು ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 6 ಉಳಿದ ಆರೋಪಿತರಿಗೆ ಖುಮ್ಮಕ್ಕು ನೀಡುತ್ತಿದ್ದರು ಎಂದರೆ ಸರಿ. ನಾನು ಸಹ ಗಲಾಟೆ ಬಿಡಿಸಿರುತ್ತೇನೆ

ಎಂದರೆ ಸರಿಯಲ್ಲ. ಚಾಸಾ. 1 ರಿಂದ 3 ಅವರನ್ನು ಕುರಿತು ಕೊಲೆ ಬೆದರಿಕೆ ಹಾಕಿದ್ದು ಕಲ್ಲುಗಳನ್ನು ಸ್ಥಳದಲ್ಲಿಯೇ ಬಿಸಾಕಿ ಹೋಗಿರುತ್ತಾರೆಂದರೆ ಸರಿ. 10 ರಿಂದ 12 ಜನ ಜಗಳ ನೋಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೂ ಜೆ.ಸಿ.ಬಿ ತೆಗೆದುಕೊಂಡು ಹೋಗಿರತ್ತಾರೆಂದರೆ ಸರಿ. ನಂತರ ನನಗೆ ಪೊಲಿಸರು ಸ್ಥಳಕ್ಕೆ ಬಂದಿರುವಾಗ ಚಾಸಾ1 ಅವರು ದೂರು ನೀಡಿರುವ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆಸರಿ. ದಿಃ 30.03.2022 ರಂದು ನಾನು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರಃ ಬಿ.ಕೆ.ವಿ ವಕೀಲರಿಂದಃ**

ನಾನು ಯಾವತ್ತಿಗೂ ಪೊಲಿಸ ಠಾಣೆಗೆ ಹೋಗಿರುವುದಿಲ್ಲ. ಕೃಷ್ಣೆಗೌಡರು ನನ್ನನ್ನು ಸಹಿ ಮಾಡಲು ಕರೆದುಕೊಂಡು ಹೋಗಿರುತ್ತಾರೆ. ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ಕೃಷ್ಣೆಗೌಡ ಅವರು ಹೇಳಿದದಂತೆ ಹೇಳಿಕೆ ಬರೆದುಕೊಂಡಿರುತ್ತಾರೆ. ಯಾರು ಯಾರಿಗೆ ಹೊಡೆದಿರುತ್ತಾರೆಂದರೆ ಸಾಕ್ಷಿ ನಾನು ನೋಡಿದ್ದೇನೆಂದು ಹೇಳುತ್ತಾರೆ. ಚಾಸಾ 2 ಅವರಿಗೆ ಯಾರು ಎಲ್ಲಿ ಹೊಡೆದಿದ್ದಾರೆಂದು ನಾನು ನೋಡಿಲ್ಲ. ಪೊಲಿಸರು ಹೇಳಿಕೆ ಮಾಡಿರುವ ಸಮಯದಲ್ಲಿ ಯಾರು ಇದ್ದರೆಂದು ಹೇಳಲು ಆಗುವುದಿಲ್ಲ.

ಪೊಲಿಸರ ಮುಂದೆ ಹೇಳಿರುವ ಹೇಳಿಕೆಯಲ್ಲಿ ಕರಿಯಮ್ಮ ಅವರ ಮಕ್ಕಳು ಭಾಗ ಮಾಡಿಕೊಂಡಿರುವ ಬಗ್ಗೆ ಹೇಳಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆ ನೋಡಿರುವುದಿಲ್ಲ. ನನಗೆ ಚಕ್ಕುಬಂದಿ ಗೊತ್ತಿಲ್ಲ. ನನಗೆ ಪ್ರಕರಣ ಬಗ್ಗೆ ಏನು ಗೊತ್ತಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲಿಸರ ಮಂದೆ ಯಾವುದೆ ಹೇಳಿಕೆ ನೀಡಿಲ್ಲ ನಾನು ಕೃಷ್ಣೆಗೌಡ ಅವರು ಹೇಳಿದಂತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಯಾವುದೇ ಘಲಾಟೆ ನಡೆದಿಲ್ಲವೆಂದರೆ ಸರಿಯಲ್ಲ. ಸದರಿ ಗಲಾಟೆಯಲ್ಲಿ 20 ಜನ ಇದ್ದರು ಎಂದು ಹೇಳುತ್ತಾರೆ.

ಗಲಾಟೆ ಆದ ಜಾಗ ಗ್ರಾಮ ಠಾಣಾ ಜಾಗ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮರೆಯಲ್ಲಿ ನಿಂತುಕೊಂಡು ನೋಡಿರುತ್ತೇನೆ. ಗಲಾಟೆ ಜಾಗದಿಂದ ನನ್ನ ಜಮೀನು 150 ಮೀಟರ ದೂರನಲ್ಲಿದ್ದೆ. ನನ್ನ ಜಮೀನು ಸರ್ವೆ ನಂ 41/2, 2/1 ಜಮೀನನಲ್ಲಿ ತೆಂಗುಬೆಳೆದಿರುತ್ತದೆ. ಗಲಾಟೆ ಆದ ಜಾಗ ಸರ್ವೆ 42, 43 ಇರಬಹುದು ನನಗೆ ಗೊತ್ತಿಲ್ಲ. ನಾನು ಪೊಲಿಸರ ಮುಂದೆ ಹೇಳಿರುವ ಹೇಳಿಕೆಯಲ್ಲಿ ಚಾಸಾ 1 ಅವರು ದೂರು ನೀಡಿರುವ ವಿಚಾರ ಹೇಳಿರುತ್ತೇನೆ. ನಾನು ದೂರು ನೀಡುವ ಸಮಯದಲ್ಲಿ ಚಾಸಾ1 ಅವರೊಂದಿಗೆ ಹೋಗಿರುವುದಿಲ್ಲ. ಈ ದಿನ ನ್ಯಾಯಾಲಯಕ್ಕೆ ನನ್ನನ್ನು ಚಾಸಾ2 ಕರೆತಂದಿರುತ್ತಾರೆ.

ಚಾಸಾ2 ಅವರು ನ್ಯಾಯಾಲಯದ ಬಾಗಿಲು ಬಳಿ ನಿಂತಿರುತ್ತಾರೆ. ನಾನು ಸಾಕ್ಷ್ಯ ನುಡಿಯಬೇಕೆಂದು ರಾಜಣ್ಣನ ಜೊತೆ ಮಾಡಿ ಕೃಷ್ಣೆಗೌಡರೇ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 1 ಅವರು ಕೋಳಿ ಪಾರ್ಮ ಇಟ್ಟುಕೊಂಡಿದ್ದು ಅದೇ ಜಮೀನಿನಲ್ಲಿ ಬೆಳೆ ಬೆಳೆಯುತ್ತಾರೆ ಎಂದರೆ ಸರಿ. ಗ್ರಾಮ ಠಾಣಾದ ಆಚೆಗೆ ಆರೋಪಿ 1 ಇದ್ದು ಇಚೇಗೆ ರಾಜಣ್ಣ ಇದ್ದಾರೆ. ಎಲ್ಲರೂ ಗ್ರಾಮ ಠಾಣೆಯಲ್ಲಿದ್ದಾಗ ಎಂದರೆ ನನಗೆ ಗೊತ್ತಿಲ್ಲ. ನಾನು ಗಲಾಟೆ ಆದ ಸ್ಥಳ ನೋಡಿಲ್ಲವೆಂದರೆ ಸರಿಯಲ್ಲ. ಚಾಸಾ2 ಅವರೊಂದಿಗೆ ಸೇರಿಕೊಂಡು ಕೃಷ್ಣೆಗೌಡ ಅವರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ 1 ಹಟ್ಟಿ ಜಾಗದಲ್ಲಿದ್ದಾರೆ ಎಂದರೆ ಸರಿಯಲ್ಲ. ಹಟ್ಟಿ ಜಾಗದಲ್ಲಿ ಆರೋಪಿ 1 ದೇವರನ್ನು ಕರೆಯಿಸಿ ಮೆರವಣಿಗೆ ಮಾಡಿಸಿದ್ದಾರೆಂದರೆ ಸರಿಯಲ್ಲ. ಆರೋಪಿ 1 ಬೆನಚಕಲ್ಲಪ್ಪ ದೇವರನ್ನು ಕರೆಯಿಸಿ ಮೆರವಣಿಗೆ ಮಾಡಿದ್ದಾರೆಂದರೆ ನಾನು ನೋಡಿಲ್ಲವೆಂದು ಹೇಳುತ್ತಾರೆ. ಸದರಿ ಮೆರವಣಿಗೆಗೆ ಯಾರು ತೊಂದರೆ ನೀಡಬಾರದೆಂದು ಪಿ.ಎಸ್.ಐ ಅವರು ಚಾಸಾ2 ಅವರನ್ನು ಕರೆಯಿಸಿ ವಾರ್ನಿಂಗ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಯಾವುದೇ ಮನೆ ಇರಲಿಲ್ಲಎಂದರೆ ಸರಿಯಲ್ಲ.

ಆರೋಪಿ 2 ಚಾಸಾ3 ಅವರ ಕಲ್ಲಿನಿಂದ ಹೊಡೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಅವರು ಚಿಕಿತ್ಸೆ ಪಡೆದಿಲಲ್ಲವೆಂದರೆ ಸರಿಯಲ್ಲ. ನಾನು ಆಸ್ಪತ್ರಗೆ ಹೋಗಿಲ್ಲ . ಪುಟ್ಟಸ್ವಾಮಿ ಅವರ ಕುಟುಂಬದ ಮೇಲೆ ನನಗೆ ದ್ವೇಷ ಇದೆ ಎಂದರೆ ಸರಿಯಲ್ಲ. ಪುಟ್ಟರಾಮ ಮತ್ತು ಸುರೇಶ್ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ ಆರೋಪಿ 1 ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆಂದರೆ ಸಾಕ್ಷಿ ಇಲಿಯೂ ಇರುತ್ತಾರೆ ಬೆಂಗಳೂರಿನಲ್ಲಿಯೂ ಇರುತ್ತಾರೆ ಎಂದು ಹೇಳುತ್ತಾರೆ. ನಾನು ಪುಟ್ಟಸ್ವಾಮಯ್ಯ ಅವರೊಂದಿಗೆ ಮಾತನಾಡುವುದಿಲ್ಲವಂದರೆ ಸರಿ. ಮು. ಮಾ. ಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**